**ಕರ್ನಾಟಕ ಸರ್ಕಾರ**
**ಕೃಷಿ ಇಲಾಖೆ**

ಸಂ.ಬೆಸವಿ/ಜಿಲ್ಲಾ-ಜ.ಕೃ.ನಿ.ಪತ್ರ-11/2021-22

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು-01,
ದಿನಾಂಕ:17-07-2021

**ಸುತ್ತೋಲೆ-2**

ವಿಷಯ: 2021-22ನೇ ಸಾಲಿನ ಪೂರ್ವ ಮುಂಗಾರು ಮತ್ತು ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಯೋಜನೆಯಡಿ ರೈತರ ಬೆಳೆ ಸಮೀಕ್ಷೆ ಆಪ್ ಬಗ್ಗೆ ಹೆಚ್ಚಿನ ಪ್ರಚಾರ ನೀಡುವ ಹಾಗೂ ಪ್ರಗತಿಯನ್ನು ಸಾಧಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ ಕೃಇ/83/ಕೃಕೈಉ/2020/, ದಿ.07-08-2020, ಬೆಂಗಳೂರು.
2. ಸರ್ಕಾರದ ಆದೇಶ ಸಂಖ್ಯೆ: AGRI-AML-108/2021 Bengaluru, ದಿ: 17.04.2021.
3. ಈ ಕಚೇರಿ ಪತ್ರದ ಸಂಖ್ಯೆ ಸಂ.ಬೆಸವಿ/ಸುತ್ತೋಲೆ – ಪವ್ಯ-06/2021-22; ದಿ. 20.06.2021.
4. ದಿನಾಂಕ:16-07-2021ರಂದು ಮಾನ್ಯ ಕೃಷಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಚರ್ಚಿಸಿ ಸೂಚಿಸಿದಂತೆ.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನಲ್ಲಿ ಬೆಳೆ ಸಮೀಕ್ಷೆಯನ್ನು ರೈತರ ಮೊಬೈಲ್ ಆಪ್ ಬಳಸಿಕೊಂಡು ಅನುಷ್ಠಾನಗೊಳಿಸಲು ಉಲ್ಲೇಖ-01 ರಲ್ಲಿ ಹಾಗೂ 2021-22 ನೇ ಸಾಲಿನಲ್ಲಿ ಮುಂದುವರೆಸಲು ಉಲ್ಲೇಖ-02 ರಲ್ಲಿ ಸರ್ಕಾರಿ ಆದೇಶ ಹೊರಡಿಸಲಾಗಿದ್ದು, ಉಲ್ಲೇಖ-04 ರ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾನ್ಯ ಕೃಷಿ ಸಚಿವರು ರೈತರ ಬೆಳೆ ಸಮೀಕ್ಷೆ ಆಪ್ ಮೂಲಕ ಸಾಧಿಸಿರುವ ಪ್ರಗತಿಯನ್ನು ಪರಿಶೀಲಿಸಿ ಕಡಿಮೆ ಪ್ರಗತಿ ಸಾಧಿಸಿರುವುದಕ್ಕೆ ಸಭೆಯಲ್ಲಿ ವಿವರಣೆಗಳನ್ನು ಪಡೆದು ಮುಂದಿನ ದಿನಗಳಲ್ಲಿ ಪೂರ್ವ ಮುಂಗಾರು ಹಾಗೂ ಮುಂಗಾರು ಹಂಗಾಮಿನಲ್ಲಿ ಬೆಳೆ ಸಮೀಕ್ಷೆಯ ಗರಿಷ್ಠ ಪ್ರಗತಿಯನ್ನು ರೈತರಿಂದಲೇ ಸಕಾಲದಲ್ಲಿ ಸಾಧಿಸಲು ಸೂಚಿಸಿರುತ್ತಾರೆ. ಈ ನಿಟ್ಟಿನಲ್ಲಿ, ಈಗಾಗಲೇ ಪ್ರಸ್ತುತ ಇರುವ ಕೋವಿಡ್-19 ಮಾರ್ಗಸೂಚಿಗಳನ್ವಯ ಜಿಲ್ಲಾ ಮಟ್ಟದಲ್ಲಿ ಕೆಲವು ಅಗತ್ಯ ಕ್ರಮಗಳನ್ನು ಕೈಗೊಂಡು ನಿಗಧಿತ ಪ್ರಗತಿಯನ್ನು ಸಾಧಿಸುವಂತೆ ಉಲ್ಲೇಖ – 3 ರ ಸುತ್ತೋಲೆ -1 ರಲ್ಲಿ ಸೂಚಿಸಲಾಗಿರುತ್ತದೆ.

ಮುಂದುವರೆದು, ಪ್ರಸ್ತುತ ಹಂಗಾಮಿನಲ್ಲಿ ರೈತರ ಬೆಳೆ ಸಮೀಕ್ಷೆ ಆಪ್ ಮೂಲಕ ಸಾಧಿಸಿರುವ ಪ್ರಗತಿಯು ಕಡಿಮೆ ಇರುವ ಹಿನ್ನೆಲೆಯಲ್ಲಿ ಹಾಗೂ ಮಾನ್ಯ ಕೃಷಿ ಸಚಿವರು ಸೂಚಿಸಿದಂತೆ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ನಿಟ್ಟಿನಲ್ಲಿ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳುವುದು.

1. ರೈತರು ತಮ್ಮ ಕ್ಷೇತ್ರಗಳಲ್ಲಿ ಬೆಳೆದಿರುವ ಬೆಳೆಗಳ ವಿವರಗಳನ್ನು ರೈತರೇ ಸ್ವತಃ "ರೈತ ಬೆಳೆ ಸಮೀಕ್ಷೆ" ಆಪ್ ಮೂಲಕ ನಮೂದಿಸಲು ಹೆಚ್ಚಿನ ಅರಿವನ್ನು ಮೂಡಿಸುವ ಸಲುವಾಗಿ ಜಿಲ್ಲಾ /ತಾಲ್ಲೂಕು / ಹೋಬಳಿ/ ಗ್ರಾಮ ಮಟ್ಟದಲ್ಲಿ ನಿರಂತರವಾಗಿ ಪ್ರಚಾರ ಸಭೆಗಳನ್ನು ನಡೆಸುವುದು.
2. ಪತ್ರಿಕಾ ಮತ್ತು ದೃಶ್ಯ ಮಾಧ್ಯಮಗಳ ಮೂಲಕ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಕಾಲ ಕಾಲಕ್ಕೆ ಪ್ರಚಾರ ನೀಡುವುದು.
3. ಪ್ರಚಾರಕ್ಕೆ ಸಂಬಂಧಪಟ್ಟಂತೆ ಕರಪತ್ರಗಳು, ಪೋಸ್ಟರ್ ಗಳು ಮತ್ತು ಬ್ಯಾನರ್‌ಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಮುದ್ರಿಸಿ ರೈತ ಸಂಪರ್ಕ ಕೇಂದ್ರ, ಹಾಲು ಉತ್ಪಾದಕ ಸಹಕಾರ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಗ್ರಾಮ ಪಂಚಾಯತಿ, ನಾಡಕಛೇರಿ ಮತ್ತು ಹೆಚ್ಚಿನ ಜನಸಂದಣಿ ಇರುವ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಪ್ರದರ್ಶಿಸಲು ಕ್ರಮ ಕೈಗೊಳ್ಳುವುದು.

ಅದ್ದರಿಂದ ರೈತರ ಬೆಳೆ ಸಮೀಕ್ಷೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಮತ್ತು ಪ್ರಚಾರವನ್ನು ಕೈಗೊಳ್ಳುವ ಸಲುವಾಗಿಯೇ ಬಿಡುಗಡೆಗೊಳಿಸಿರುವ ಪ್ರಚಾರ ಘಟಕದಡಿಯ ಅನುದಾನವನ್ನು ಸಂಪೂರ್ಣವಾಗಿ ಹಾಗೂ ಪರಿಣಾಮಕಾರಿಯಾಗಿ ಬಳಸಿಕೊಂಡು, ಪ್ರಸ್ತುತ ಇರುವ ಕೋವಿಡ್-19 ಮಾರ್ಗಸೂಚಿಗಳನ್ನು ಪಾಲಿಸಿ ಇಲಾಖೆಯಲ್ಲಿ ನಿಯಮಿತವಾಗಿ ನಡೆಯುವ ಕಾರ್ಯಕ್ರಮಗಳಲ್ಲಿ, ಜನಪ್ರತಿನಿಧಿಗಳ ಭೇಟಿ ಹಾಗೂ ಭಾಷಣಗಳಲ್ಲಿ ಬೆಳೆ ಸಮೀಕ್ಷೆ ಅದರಲ್ಲೂ ಪ್ರಮುಖವಾಗಿ ರೈತರೇ ಕೈಗೊಳ್ಳಲು, ಬೆಳೆ ಸಮೀಕ್ಷೆಯ ವಿವರಗಳನ್ನು ಪಹಣಿಗಳಲ್ಲಿ ಇಂಧೀಕರಿಸುತ್ತಿರುವ/ ಸಮೀಕರಿಸುತ್ತಿರುವ ಮಹತ್ವ, ಸದರಿ ಬೆಳೆ ಸಮೀಕ್ಷೆ ವಿವರಗಳನ್ನು ವಿವಿಧ ಇಲಾಖೆಗಳಲ್ಲಿ ಸವಲತ್ತುಗಳನ್ನು ಹಾಗೂ ಪರಿಹಾರ / ಸಹಾಯಧನವನ್ನು ವಿತರಿಸಲು ಅನುಸರಿಸುತ್ತಿರುವ (ಬೆಳೆ ವಿಮೆ, ಬರ ಮತ್ತು ನೆರೆ ಪರಿಹಾರ, ಕೋವಿಡ್ ಸಂಕಷ್ಟದ ಬೆಳೆ ನಷ್ಟ ಪರಿಹಾರ, ಕನಿಷ್ಠ ಬೆಂಬಲ ಬೆಲೆ ಯೋಜನೆ, ಬೆಳೆ ಸಾಲ ಯೋಜನೆ ಮತ್ತು ಇನ್ನಿತರೆ ಪ್ರಕರಣಗಳನ್ನು ಇತ್ಯರ್ಥಪಡಿಸಲು) ಕುರಿತಾದ ವಿಷಯವನ್ನು ಪ್ರಸ್ತಾಪಿಸುವಂತೆ ಹಾಗೂ ಇಲಾಖಾ ಸಭೆ / ತರಬೇತಿಗಳಲ್ಲಿ ಚರ್ಚಿಸಲು ಕ್ರಮ ಕೈಗೊಳ್ಳುವುದು, ತಮ್ಮ ಜಿಲ್ಲೆಗಳ ಸಚಿವರು, ಶಾಸಕರು ಹಾಗೂ ಎಲ್ಲಾ ಜನಪ್ರತಿನಿಧಿಗಳನ್ನೊಳಗೊಂಡು ಬೆಳೆ ಸಮೀಕ್ಷೆ ಪ್ರಾತ್ಯಕ್ಷತೆಯನ್ನು ಕ್ಷೇತ್ರ ಮಟ್ಟದಲ್ಲಿ ಆಯೋಜಿಸಿ ಬೆಳೆ ಸಮೀಕ್ಷೆ ಯೋಜನೆಯ ಹಾಗೂ ಮೇಲೆ ತಿಳಿಸಿರುವ ವಿಷಯಗಳ ಕುರಿತು ರೈತರಲ್ಲಿ ಹೆಚ್ಚಿನ ಪ್ರಚಾರ ಕೈಗೊಂಡು ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಲು ಈ ಮೂಲಕ ತಿಳಿಸಿದೆ ಹಾಗೂ ಪ್ರಚಾರಕ್ಕೆ ತಗಲುವ ವೆಚ್ಚಗಳನ್ನು ಮೇಲೆ ತಿಳಿಸಿರುವಂತೆ ಬೆಳೆ ಸಮೀಕ್ಷೆಯ ಪ್ರಚಾರ ಘಟಕದಡಿ ಲಭ್ಯವಿರುವ ಅನುದಾನವನ್ನು ಕೂಡಲೇ ವೆಚ್ಚ ಭರಿಸಲು ಹಾಗೂ ರೈತರ ಬೆಳೆ ಸಮೀಕ್ಷೆ ಆಪ್ ಮೂಲಕ ಹೆಚ್ಚು ಪ್ರಗತಿಯನ್ನು ಸಾಧಿಸಿ ಬೆಳೆ ಸಮೀಕ್ಷೆಗೆ ಸಂಬಂಧಿಸಿದ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ವೇಳಾಪಟ್ಟಿಯ ಅನುಸಾರ ಪೂರ್ಣಗೊಳಿಸಲು ತಿಳಿಸಿದೆ.

ಕೃಷಿ ಆಯುಕ್ತರು 05/8/21

ಪ್ರತಿಯನ್ನು :

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಮಾಹಿತಿಗಾಗಿ ಕಳುಹಿಸಿದೆ.
2. ಎಲ್ಲಾ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರಿಗೆ ಕಳುಹಿಸುತ್ತಾ ಸದರಿ ಸುತ್ತೋಲೆಯನ್ನು ವಿಭಾಗ, ತಾಲ್ಲೂಕು & ಹೋಬಳಿ ಮಟ್ಟಕ್ಕೆ ತಲುಪಿಸುವಂತೆ ಸೂಚಿಸಿ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.